28/04/22 ಪ್ರಾತಃಮುರುಳಿ ಓಂಶಾಂತಿ ಬಾಪ್ದಾದಾ ಮಧುಬನ

"ಮಧುರ ಮಕ್ಕಳೇ – ಈಗ ಹಿಂತಿರುಗಿ ಮನೆಗೆ ಹೋಗಬೇಕಾಗಿದೆ, ಆದ್ದರಿಂದ ದೇಹಭಾನವನ್ನು ಬಿಡುತ್ತಾ ಸಾಗಿರಿ, ನಾನು ಬಹಳ ಚೆನ್ನಾಗಿದ್ದೇನೆ, ಧನವಂತನಾಗಿದ್ದೇನೆ ಎಂಬುದೆಲ್ಲವನ್ನು ಬಿಟ್ಟು ತಮ್ಮನ್ನು ಆತ್ಮನೆಂದು ತಿಳಿದುಕೊಳ್ಳಿ"

ಪ್ರಶ್ನೆ: ಯಾವ ನಿಶ್ಚಯ ಅಥವಾ ಧಾರಣೆಯಿಂದ ನೀವು ಮಕ್ಕಳು ತಮ್ಮ ಬಹಳ ಶ್ರೇಷ್ಠ ಅದೃಷ್ಟವನ್ನು ರೂಪಿಸಿಕೊಳ್ಳುತ್ತೀರಿ?

ಉತ್ತರ: 1. ಮೊಟ್ಟ ಮೊದಲ ನಿಶ್ಚಯವಿರಲಿ - ನಾವು ಆತ್ಮರಾಗಿದ್ದೇವೆ, ಈಗ ಈ ಶರೀರವನ್ನು ಬಿಟ್ಟು ಮನೆಗೆ ಹಿಂತಿರುಗಿ ಹೋಗಬೇಕಾಗಿದೆ. ಆದ್ದರಿಂದ ಈ ಪ್ರಪಂಚದೊಂದಿಗೆ ಮನಸ್ಸನ್ನಿಡಬಾರದು. 2. ನಮಗೆ ಓದಿಸುವವರು ಹಾಗೂ ಜೊತೆಯಲ್ಲಿ ಮನೆಗೆ ಕರೆದುಕೊಂಡು ಹೋಗುವವರು ಸ್ವಯಂ ಶಿವ ತಂದೆಯಾಗಿದ್ದಾರೆ. ನಾವು ಅವರ ಶ್ರೀಮತದಂತೆ ನಡೆಯಬೇಕು. ಶ್ರೀಮತದಂತೆ ನಡೆದು ತಮ್ಮ ಹಾಗೂ ತಮ್ಮ ಮಿತ್ರ ಸಂಬಂಧಿಗಳ ಕಲ್ಯಾಣ ಮಾಡಬೇಕಾಗಿದೆ. ಯಾವ ಮಕ್ಕಳು ಶ್ರೀಮತದಂತೆ ನಡೆಯುವುದಿಲ್ಲ ಮತ್ತು ಯಾರಿಗೆ ಓದಿಸುವಂತಹ ತಂದೆಯಲ್ಲಿ ನಿಶ್ಚಯವಿರುವುದಿಲ್ಲ, ಅವರು ಯಾವ ಕೆಲಸಕ್ಕೂ ಬರುವುದಿಲ್ಲ. ಅವರು ನಡೆಯುತ್ತಾ-ನಡೆಯುತ್ತಾ ತಂದೆಯಿಂದ ದೂರವಾಗಿ ಬಿಡುತ್ತಾರೆ. ಅಂತಹವರು ಶ್ರೇಷ್ಠ ಅದೃಷ್ಟವನ್ನು ರೂಪಿಸಿಕೊಳ್ಳಲು ಸಾಧ್ಯವಿಲ್ಲ.

ಗೀತೆ: ಓಂ ನಮಃ ಶಿವಾಯ.........

ಓಂ ಶಾಂತಿ. ಮಕ್ಕಳು ಕುಳಿತಿದ್ದೀರಿ ಮತ್ತು ತಂದೆಯ ಸಮ್ಮುಖದಲ್ಲಿ ಕುಳಿತಿದ್ದೇವೆಂದು ತಿಳಿದುಕೊಂಡಿದ್ದೀರಿ. ನೀವು ಯಾವುದೇ ಸನ್ಯಾಸಿ, ದುಃಖಿ ಮಿತ್ರ-ಸಂಬಂಧಿ ಮೊದಲಾದವರ ಮುಂದೆ ಕುಳಿತುಕೊಂಡಿಲ್ಲ. ನಾವು ಅವಶ್ಯವಾಗಿ ಅತಿ ಮಧುರ ತಂದೆ ಯಾರನ್ನು ನಾವು ಜನ್ಮ-ಜನ್ಮಾಂತರದಿಂದ ನೆನಪು ಮಾಡುತ್ತಿದ್ದೆವು ಅವರ ಸಮ್ಮುಖದಲ್ಲಿ ಕುಳಿತಿದ್ದೇವೆಂದು ತಿಳಿದುಕೊಂಡಿದ್ದೇವೆ. ನಾವೂ ಸಹ ಬದುಕಿರುವಾಗಲೇ ಅವರ ಮಕ್ಕಳಾಗಿದ್ದೇವೆ. ಸನ್ಯಾಸಿಗಳಗಂತೂ ಅನುಯಾಯಿಗಳಾಗಿದ್ದು ತಮ್ಮ ಮನೆಯಲ್ಲಿರುತ್ತಾರೆ. ಅವರು ತಮ್ಮನ್ನು ಅನುಯಾಯಿಗಳೆಂದು ಹೇಳಿಕೊಂಡರೂ ಸಹ ಸನ್ಯಾಸಿಗಳನ್ನು ಅನುಸರಿಸುವುದಿಲ್ಲ. ನೀವು ಮಕ್ಕಳು ತಂದೆಯನ್ನು ಅನುಸರಿಸಬೇಕು. ನಾವು ಆತ್ಮರು ತಂದೆ ಎಲ್ಲಿಗೆ ಹೋಗುತ್ತಾರೆಯೋ ಅಲ್ಲಿಗೆ ನಾವು ಹೋಗುತ್ತೇವೆಂದು ಬುದ್ಧಿಯಲ್ಲಿ ನೆನಪಿರಬೇಕು. ನಿರಾಕಾರ ತಂದೆ ಪತಿತರನ್ನು ಪಾವನ ಮಾಡುವುದಕ್ಕಾಗಿ ಪರಮಧಾಮದಿಂದ ಇಲ್ಲಿಗೆ ಬಂದಿದ್ದಾರೆ. ಬರುವುದೂ ಸಹ ಪತಿತ ಪ್ರಪಂಚದಲ್ಲಿ, ಪತಿತ ಶರೀರದಲ್ಲಿ ಬರುತ್ತಾರೆ. ಯಾರು ಮೊದಲನೆಯ ಸ್ಥಾನದಲ್ಲಿ ಪಾವನರಾಗಿದ್ದರು, ಅವರು 84 ಜನ್ಮಗಳನ್ನು ತೆಗೆದುಕೊಳ್ಳುತ್ತಾರೆ. ಅವರಲ್ಲಿಯೇ ಕುಳಿತುಕೊಂಡು ಇದೆಲ್ಲವನ್ನು ತಿಳಿಸುತ್ತಾರೆ. ಇಲ್ಲಿ ಅನೇಕ ಮಕ್ಕಳು ಕುಳಿತಿದ್ದಾರೆ. ಶಿಕ್ಷಕರು ಒಬ್ಬರಿಗೆ ಮಾತ್ರ ಓದಿಸುತ್ತಾರೇನು? ಕೇವಲ ಅರ್ಜುನನಿಗಾಗಿ ಭಗವಾನುವಾಚ ಇರಲು ಸಾಧ್ಯವಿಲ್ಲ. ನಾವು ಆತ್ಮಗಳು ತಂದೆಯ ಸಮ್ಮುಖದಲ್ಲಿ ಕುಳಿತಿದ್ದೇವೆಂದು ಮಕ್ಕಳು ತಿಳಿದುಕೊಂಡಿದ್ದೀರಿ. ಬೇರೆ ಯಾವ ಸತ್ಸಂಗದಲ್ಲಿಯೂ ಹೀಗೆ ತಿಳಿದುಕೊಳ್ಳುವುದಿಲ್ಲ. ನೀವು ಈಗ ಮನೆಗೆ ಹಿಂತಿರುಗಬೇಕೆಂದು ನಿಮಗೆ ತಿಳಿಸಲಾಗಿದೆ. ಶರೀರವನ್ನು ಇಲ್ಲಿಯೇ ಬಿಡಬೇಕಾಗಿದೆ ಆದ್ದರಿಂದ ದೇಹಭಾನವನ್ನು ಬಿಡುತ್ತಾ ನಡೆಯಿರಿ. ನಾನು ಬಹಳ ಚೆನ್ನಾಗಿದ್ದೇನೆ, ಧನವಂತನಾಗಿದ್ದೇನೆ, ಇದೆಲ್ಲವನ್ನು ಬಿಡಬೇಕಾಗಿದೆ. ನಾನು ಆತ್ಮನಾಗಿದ್ದೇನೆಂಬ ನಿಶ್ಚಯ ಮಾಡಿಕೊಳ್ಳಬೇಕು. ತಂದೆಯನ್ನು ನೆನಪು ಮಾಡುತ್ತಾ-ಮಾಡುತ್ತಾ ತಂದೆಯ ಜೊತೆ ಹೋಗಬೇಕು. ನನಗೆ ದೇಹಾಭಿಮಾನ ಬರುವುದಿಲ್ಲ ಏಕೆಂದರೆ ನನಗೆ ನನ್ನ ದೇಹವಿಲ್ಲವೆಂದು ಶಿವ ತಂದೆಯು ಹೇಳುತ್ತಾರೆ. ನಿಮಗೂ ಸಹ ಮೊದಲು ದೇಹಾಭಿಮಾನ ಇರಲಿಲ್ಲ ಅಲ್ಲವೇ! ನೀವು ಮೊದಲು ನನ್ನ ಬಳಿ ಇದ್ದವರು ನಂತರ ನೀವು 84 ಜನ್ಮಗಳ ಪಾತ್ರವನ್ನು ಅಭಿನಯಿಸಬೇಕಾಯಿತು. ನಾವು ರಾಜ್ಯಭಾಗ್ಯವನ್ನು ತೆಗೆದುಕೊಂಡಿದ್ದೆವು ನಂತರ ಮಾಯೆಯು ಸೋಲಿಸಿತೆಂದು ನೀವು ಹೇಳುತ್ತೀರಿ. ಈಗ ಮತ್ತೆ ನಿಮ್ಮನ್ನು ಮುಕ್ತಿಧಾಮಕ್ಕೆ ಹಿಂತಿರುಗಿ ಕರೆದುಕೊಂಡು ಹೋಗಲು ಬಂದಿದ್ದೇನೆ. ಶರೀರವನ್ನಂತು ತೆಗೆದುಕೊಂಡು ಹೋಗುವುದಿಲ್ಲ. ಇದು ಹಳೆಯ ಶರೀರವಾಗಿದೆ ಆದ್ದರಿಂದ ಈ ದೇಹಭಾನವನ್ನು ಬುದ್ಧಿಯಿಂದ ದೂರಗೊಳಿಸಬೇಕು. ಆದರೆ ತಮ್ಮ ಗೃಹಸ್ಥ-ವ್ಯವಹಾರದಲ್ಲಿರಬೇಕು ಏಕೆಂದರೆ ಇದು ಯಾವುದೇ ಸನ್ಯಾಸಿಗಳ ಮತವಲ್ಲ. ತಮ್ಮ ಮನೆ-ಮಠವನ್ನೂ ಸಹ ಪಾಲನೆ ಮಾಡಬೇಕು. ಅವರು ಎಲ್ಲವನ್ನು ಬಿಟ್ಟು ಹೋಗುತ್ತಾರೆ ಆದರೆ ತಂದೆಯು ಮಕ್ಕಳಿಂದ ಏನನ್ನೂ ಬಿಡಿಸುವುದಿಲ್ಲ. ತಂದೆಯು ತಿಳಿಸುತ್ತಾರೆ - ನೀವು ನಿಮ್ಮ ಮಕ್ಕಳಿಗೂ ಸಹ ಶಿವ ತಂದೆಯನ್ನು ನೆನಪು ಮಾಡಿ ಎಂದು ನೆನಪು ತರಿಸಬೇಕಾಗಿದೆ. ತಿಳಿಸಿಕೊಡುತ್ತಿದ್ದಾಗ ಅವರಿಗೂ ಶಿವ ತಂದೆಯ ಜೊತೆ ಪ್ರೀತಿಯುಂಟಾಗುವುದು. ಶಿವ ತಂದೆಯು ಎಷ್ಟೊಂದು ಮಧುರ ಹಾಗೂ ಪ್ರಿಯರಾಗಿದ್ದಾರೆ. ಎಲ್ಲರನ್ನು ಇಲ್ಲಿಯೇ ಇಟ್ಟುಕೊಂಡರೆ ಮಕ್ಕಳನ್ನು ಯಾರು ನೋಡಿಕೊಳ್ಳುತ್ತಾರೆ. ಇಲ್ಲಿ ಅನೇಕ ಮಕ್ಕಳು ಈ ರೀತಿಯಿದ್ದಾರೆ, ಅವರು ಇಲ್ಲಿಂದ ಶರೀರವನ್ನು ಬಿಟ್ಟು ಹೋಗಿ ಮತ್ತೆ ಬೇರೆ ಜನ್ಮವನ್ನು ತೆಗೆದುಕೊಂಡು ತಂದೆಯಿಂದ ಆಸ್ತಿಯನ್ನು ತೆಗೆದುಕೊಳ್ಳಲು, ತಂದೆ ಜೊತೆ ಮಿಲನ ಮಾಡಲು ಮತ್ತೆ ಬರುತ್ತಾರೆ. ನಾವು ಆತ್ಮನಾಗಿದ್ದೇವೆ ಎನ್ನುವ ನಿಶ್ಚಯವಿರಬೇಕು. ಈ ಶರೀರವನ್ನು ಬಿಟ್ಟು ಮನೆಗೆ ಹಿಂತಿರುಗಬೇಕು. ಈ ಪ್ರಪಂಚದಲ್ಲಿ ನಾವು ಮನಸ್ಸನ್ನು ಇಡಬಾರದು. ನಾವು ಬ್ರಹ್ಮತತ್ವದಲ್ಲಿ ಲೀನವಾಗುತ್ತೇವೆಂದು

ಸನ್ಯಾಸಿಗಳು ಹೇಳುತ್ತಾರೆ. ಇಲ್ಲಿ ಅನೇಕ ಮತ-ಮತಾಂತರಗಳಿವೆ ಆದರೆ ನಮಗೆ ಒಬ್ಬ ತಂದೆಯೇ ಇದ್ದಾರೆ. ನಾವು ಮಕ್ಕಳನ್ನು ಹಿಂತಿರುಗಿ ಕರೆದೊಯ್ಯಲು ತಂದೆಯು ಬಂದಿದ್ದಾರೆ. ಸತ್ಯಯುಗದಲ್ಲಿ ಈ ಎಲ್ಲಾ ಧರ್ಮಗಳು ಇರಲಿಲ್ಲ. ಈಗ ಸತ್ಯಯುಗ ಸ್ಥಾಪನೆಯಾಗುತ್ತಿದೆ. ತಂದೆಯೂ ಈಗ ಪುನಸ್ರಾ ಪಕ ಆಗಿದ್ದಾರೆ. ಈಗ ನೀವು ಪರಿವರ್ತನೆ ಆಗುತ್ತಿದ್ದೀರಿ. ಅವತಾರವೆಂದು ಒಬ್ಬ ತಂದೆಗೆ ಮಾತ್ರ ಹೇಳಲಾಗುತ್ತದೆ. ಅನೇಕ ಮಕ್ಕಳು ಹೀಗೆ ಬರೆಯುತ್ತಾರೆ - ಬಾಬಾ, ನಮ್ಮ ಜೀವನದಲ್ಲಿ ಉತ್ತಮವಾದ ಪರಿವರ್ತನೆ ಬಂದಿದೆ ಆದರೆ ಕೆಲವೊಮ್ಮೆ ಸ್ವಲ್ಪ ಕ್ರೋಧ ಬರುತ್ತದೆ. ಹೌದು ಮಕ್ಕಳೇ ಹೀಗೆ ನಡೆಯುತ್ತದೆ. ಯಾವುದೇ ಕಾಯಿಲೆಯೇ ಆಗಲಿ ತಕ್ಷಣ ಹರಟು ಹೋಗುತ್ತದೆಯೇ? ಏಕೆಂದರೆ ನಿಮ್ಮ ಲ್ಲಿ ಎಲ್ಲಾ ಗುಣಗಳು ಖಾಲಿಯಾಗಿ ನಿರ್ಗುಣವುಳ್ಳವರಾಗಿದ್ದೀರಿ. ಈಗ ಸರ್ವಗುಣವಂತರಾಗಬೇಕು. ನಿಮಗೆ ಅಪಾರ ಧನ ಸಿಗುತ್ತದೆ ಆದರೆ ಅಲ್ಲಿ ಲೋಭದ ಮಾತೇ ಇರುವುದಿಲ್ಲ. ಇಲ್ಲಿ ಲೋಭಕ್ಕೆ ವಶರಾಗಿ ಎಷ್ಟೊಂದು ಕಳ್ಳತನ ಮೊದಲಾದವುಗಳನ್ನು ಮಾಡುತ್ತಾರೆ! ಅಧಿಕಾರಿಗಳ ಉದಾಸೀನತೆಯಿಂದ ದವಸ ಧಾನ್ಯದ ಗೋಡನ್ನು ಹಾಳು ಮಾಡಿ ಸುಟ್ಟು ಹಾಕುತ್ತಾರೆ. ಇಲ್ಲಿ ಮನುಷ್ಯರು ಹಸಿವೆಯಿಂದ ಕಷ್ಟ ಪಡುತ್ತಾರೆ. ನಮಗೆ ಶಿವ ತಂದೆಯು ಓದಿಸುತ್ತಿದ್ದಾರೆಂದು ನೀವು ತಿಳಿದುಕೊಂಡಿದ್ದೀರಿ. ಮೊಟ್ಟ ಮೊದಲು ನಮಗೆ ಶಿವ ತಂದೆ ಓದಿಸುತ್ತಿದ್ದಾರೆಂಬ ನಿಶ್ಚಯವು ಎಲ್ಲಿಯವರೆಗೆ ಆಗುವುದಿಲ್ಲವೋ ಅವರು ಯಾವ ಕೆಲಸಕ್ಕೂ ಉಪಯೋಗವಾಗುವುದಿಲ್ಲ. ನಿಮ್ಮ ಆತ್ಮವು ಪತಿತವಾಗಿದೆಯೆಂದು ತಂದೆಯು ತಿಳಿಸಿದ್ದಾರೆ. ಈಗ ಪಾವನವಾಗುತ್ತಿದೆ ಆದ್ದರಿಂದ ಅಗತ್ಯವಾಗಿ ಶ್ರೀಮತದಂತೆ ನಡೆಯಬೇಕು. ತಮ್ಮ ಮತವನ್ನು ನಡೆಸಬಾರದು. ಶ್ರೀಮತದಂತೆ ಮಿತ್ರ-ಸಂಬಂಧಿಗಳ ಕಲ್ಯಾಣವನ್ನೂ ಸಹ ಮಾಡಬೇಕು. ಪತ್ರವನ್ನು ಬರೆಯಬೇಕು. ಒಂದುವೇಳೆ ಶ್ರೀಮತದಂತೆ ಪತ್ರ ಬರೆಯದಿದ್ದರೆ ಅಕಲ್ಯಾಣ ಮಾಡುತ್ತೀರಿ. ಅನೇಕರು ಬಚ್ಚಿಟ್ಟುಕೊಂಡು ಪತ್ರ ಬರೆಯುತ್ತಾರೆ. ಬಾಬಾ ಶಿಕ್ಷಕ ಕುಳಿತಿದ್ದಾರೆ ಆದುದರಿಂದ ಅವರಿಗೆ ಎಲ್ಲವನ್ನು ಹೇಳಬೇಕು. ತಂದೆಯು ನಿಮಗೆ ಈ ರೀತಿ ಪತ್ರವನ್ನು ಬರೆಯುವುದನ್ನು ಕಲಿಸುತ್ತಾರೆ ಅದನ್ನು ಓದುವವರು ರೋಮಾಂಚನವಾಗಿ ನಿಂತು ಬಿಡುತ್ತಾರೆ. ಪತ್ರ ಬರೆಯುವುದಕ್ಕೆ ತಂದೆಯು ಬೇಡ ಎಂದು ಹೇಳುವುದಿಲ್ಲ ಏಕೆಂದರೆ ನೀವು ಆ ಸಂಬಂಧವನ್ನು ನಿಭಾಯಿಸಬೇಕು. ಇಲ್ಲದಿದ್ದರೆ ದಾನವನ್ನು ಮನೆಯಿಂದ ಹೇಗೆ ಆರಂಭ ಮಾಡುತ್ತೀರಿ (ಚಾರಿಟಿ ಬಿಗಿನ್ಸ್ ಅಟ್ ಹೋಮ್). ಕೆಲವರು ಶ್ರೀಮತದಂತೆ ನಡೆಯದೆ ತಂದೆಯಿಂದ ದೂರವಾಗುತ್ತಾರೆ. ಅದೃಷ್ಟದಲ್ಲಿ ಇಲ್ಲದಿದ್ದರೆ ಆಜ್ಞೆಯಂತೆ ನಡೆಯುವುದಿಲ್ಲ. ತಮ್ಮ ಸ್ತ್ರೀಯನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಂಡು ಪ್ರೀತಿಯಿಂದ ತಿಳಿಸಿಕೊಡುವುದು ನಿಮ್ಮ ಕರ್ತವ್ಯವಾಗಿದೆ. ಶಾಸ್ತ್ರಗಳಲ್ಲಿ ಈ ಸಮಯದ ಎಲ್ಲಾ ಮಾತುಗಳು ಬರೆಯಲ್ಪಟ್ಟಿವೆ. ಮೊದಲು ನೀವು ಬ್ರಾಹ್ಮಣರೂ ಸಹ ಮಂಧ ಬುದ್ಧಿಯವರಾಗಿದ್ದಿರಿ. ಈಗ ತಂದೆಯು ಬುದ್ಧಿವಂತರನ್ನಾಗಿ ಮಾಡಿದ್ದಾರೆ.

ಶಿವ ತಂದೆಯು 5 ಸಾವಿರ ವರ್ಷದ ಹಿಂದೆ ಇದೇ ರೀತಿ ಪಾತ್ರ ಮಾಡಿರಬೇಕೆಂದು ನೀವು ತಿಳಿದುಕೊಂಡಿದ್ದೀರಿ. ಹೀಗೆ ತಿಳಿಸಿರಬೇಕು ಹಾಗೂ ಈ ಬ್ರಹ್ಮಾ ತಂದೆಯೂ ಸಹ ತಿಳಿದುಕೊಂಡಿದ್ದಾರೆ. ಈಗ ನೀವು ಪುರುಷಾರ್ಥ ಮಾಡುತ್ತಿದ್ದೀರಿ, ಯಾರು ಉತ್ತಮ ಸೇವೆಯನ್ನು ಮಾಡುತ್ತಾರೆ ಅವರು ಸೂಕ್ಷ್ಮ ದೇವತೆ ಆಗುವರು. ಒಂದುವೇಳೆ ಲೆಕ್ಕಾಚಾರ ಉಳಿದುಕೊಂಡರೆ ಶಿಕ್ಷೆಗೆ ಗುರಿಯಾಗುತ್ತಾರೆ. ಈಗ ನೀವು ತಂದೆಯ ಸಮ್ಮುಖದಲ್ಲಿ ಕುಳಿತಿದ್ದೀರಿ. ನಿಮಗೆ ಶಿವ ತಂದೆಯು ತಿಳಿಸುತ್ತಾರೆ- ಬ್ರಹ್ಮಾ ತಂದೆಯು ತಿಳಿಸುತ್ತಿದ್ದಾರೆಂದು ತಿಳಿದುಕೊಳ್ಳಬಾರದು. ಮಕ್ಕಳೇ, ಈಗ ನಾಟಕ ಅಂತ್ಯವಾಗುವುದಿದೆ ಆದ್ದರಿಂದ ನೀವು ನನ್ನ ಜೊತೆ ಸಂಬಂಧವನ್ನು ಜೋಡಿಸಿದರೆ ನೀವು ಪವಿತ್ರರಾಗುತ್ತೀರಿ. ಈಗ ನೀವು ತಿಳಿದುಕೊಂಡಿದ್ದೀರಿ ನಮ್ಮನ್ನು ಕರೆದೊಯ್ಯಲು ಪ್ರಿಯತಮ ಬಂದಿದ್ದಾರೆ ಹಾಗೂ ನಿಮಗೆ ಅವರು ಓದಿಸುತ್ತಿದ್ದಾರೆ. ಇದು ಎಷ್ಟೊಂದು ಆಶ್ಚರ್ಯವಾಗಿದೆ. ನೀವು ಇಷ್ಟೊಂದು ಸೌಭಾಗ್ಯಶಾಲಿಯಾಗಿದ್ದೀರೆಂದರೆ ಒಬ್ಬ ತಂದೆಯ ಶ್ರೀಮತದಂತೆ ನಡೆಯಬೇಕಲ್ಲವೇ! ನಿಮ್ಮನ್ನು ಎಲ್ಲರಿಗಿಂತ ಶ್ರೇಷ್ಠಾತಿ ಶ್ರೇಷ್ಠರಾಗಿದ್ದೀರೆಂದು ಹೇಳುತ್ತಾರೆ. ನಾನು ಶ್ರೀ, ಶ್ರೀ ಆಗಿದ್ದೇನೆ. ನಿಮ್ಮನ್ನು ಶ್ರೀ ಅರ್ಥಾತ್ ಶ್ರೇಷ್ಠರನ್ನಾಗಿ ಮಾಡುತ್ತೇನೆ. ಶ್ರೇಷ್ಠ ಪ್ರಪಂಚವನ್ನು ಮಾಡುತ್ತೇನೆ. ಇಲ್ಲಿ ಬಹಳ ಪತಿತರಾಗಿದ್ದು ತಮ್ಮ ಮೇಲೆ ಶ್ರೀ, ಶ್ರೀ ಎಂಬ ಬಿರುದನ್ನು ಇಟ್ಟುಕೊಳ್ಳುತ್ತಾರೆ. ನೀವು ರಾವಣನ ಮೇಲೆ ವಿಜಯಿಗಳಾಗುತ್ತೀರಿ. ನಿಮ್ಮ ಆತ್ಮವೆಂಬ ಸೂಜಿಗೆ ಈಗ ತುಕ್ಕು ಇಡಿದಿದೆ. ಆದುದರಿಂದ ಆಯಸ್ಕಾಂತವು (ತಂದೆ) ಬಂದು ಸ್ವಚ್ಛ ಮಾಡುತ್ತಾರೆ. ಸ್ವಚ್ಛವಾದರೆ ಜೊತೆಯಲ್ಲಿ ಬರುತ್ತೀರಿ, ತುಕ್ಕು ಬಿಡಬೇಕೆಂದರೆ ತಂದೆಯನ್ನು ನೆನಪು ಮಾಡಿ. ಮಾತೆಯರು ಕೃಷ್ಣನ ಬಾಯಲ್ಲಿ ಬೆಣ್ಣೆಯನ್ನು ನೋಡುತ್ತಾರೆ. ಅದು ಸ್ವರ್ಗರೂಪಿ ಬೆಣ್ಣೆಯಾಗಿದೆ. ಎರಡು ಬೆಕ್ಕುಗಳು ಪರಸ್ಪರ ಜಗಳ ಮಾಡುತ್ತವೆ, ಆಗ ಬೆಣ್ಣೆ ಶ್ರೀಕೃಷ್ಣನಿಗೆ ಸಿಗುತ್ತದೆ. ಶ್ರೀಕೃಷ್ಣ ಒಬ್ಬನೇ ರಾಜ್ಯ ಮಾಡುವನೇ? ಸೂರ್ಯವಂಶ, ಚಂದ್ರವಂಶದ ಮನೆತನಗಳು ನಡೆಯುತ್ತವೆ. ಅವರ ನಂತರ ರಾಜರ ಮನೆತನ ಬರುತ್ತದೆ. ಅವುಗಳೂ ಸಹ ಬಹಳ ಸಮಯದವರೆಗೂ ನಡೆಯುತ್ತವೆ. ಈಗ ಕೊನೆಯಲ್ಲಿ ಪ್ರಜೆಗಳ ಮೇಲಿನ ರಾಜ್ಯವಾಗುತ್ತದೆ.

ತಂದೆ ನಮ್ಮನ್ನು ಪಾತ್ರವನ್ನು ಅಭಿನಯಿಸಲು ಕಳುಹಿಸಿದ್ದರೆಂದು ನೀವೀಗ ತಿಳಿದುಕೊಂಡಿದ್ದೀರಿ. ಸ್ವರ್ಗದಲ್ಲಿ ನಾವು ಬಹಳ ಸುಖಿಗಳಾಗಿದ್ದೆವು. ಭಾರತದಲ್ಲಿಯೇ 21 ಜನ್ಮಗಳ ಬಗ್ಗೆ ಗಾಯನವಿದೆ. ಕನ್ಯೆಯರು 21 ಜನ್ಮಗಳಗಾಗಿ ಭಾಗ್ಯವನ್ನು ಕೊಡಿಸುತ್ತಾರೆ. ಬಾಬಾ ಎಷ್ಟೊಂದು ಚೆನ್ನಾಗಿ ತಿಳಿಸಿಕೊಡುತ್ತಾರೆ ಆದರೂ ಸಹ ಕೆಲವರಲ್ಲಿ ಹಳೆಯ ಅವಗುಣಗಳು ಹೋಗುವುದೇ ಇಲ್ಲ. ತಂದೆ ಅತಿ ದೊಡ್ಡ ಸೇನಾಧಿಪತಿಯೂ ಆಗಿದ್ದಾರೆ. ತಂದೆಯ ಜೊತೆ ಧರ್ಮರಾಜನೂ ಇದ್ದಾರೆ. ಒಂದುವೇಳೆ ಶ್ರೀಮತದಂತೆ ನಡೆಯದಿದ್ದರೆ ತಂದೆಯ ರೈಟ್ಹ್ಯಾಂಡ್ ಧರ್ಮರಾಜ ಇದ್ದಾರೆ. ತಂದೆಯ ಮಡಿಲಲ್ಲಿ ಜನ್ಮ ಪಡೆದು ಮತ್ತೆ ಹೋಗಿ ರಾವಣನ

ಮಕ್ಕಳಾದರೆ ಎಷ್ಟೊಂದು ನಷ್ಟವಾಗುತ್ತದೆ. ಶ್ರೀಮತದಂತೆ ನಡೆಯದಿದ್ದರೆ ತಂದೆಯಿಂದ ದೂರವಾಗುತ್ತಾರೆ. ಕೇವಲ ಬುದ್ಧಿಯಿಂದ ತಂದೆಗೆ ಮಕ್ಕಳಾಗಿದ್ದೇವೆ ಎಂದು ತಿಳಿದುಕೊಳ್ಳಬೇಕೆಂದು ಎಷ್ಟೊಂದು ತಿಳಿಸುತ್ತಾರೆ. ಈ ಸಮಯದಲ್ಲಿ ಇಡೀ ಪ್ರಪಂಚವು ಕಲ್ಲು ಬುದ್ಧಿಯ ಪ್ರಪಂಚವಾಗಿದೆ. ಈ ಬ್ರಹ್ಮಾ ತಂದೆಯೂ ಸಹ ಹೇಳುತ್ತಾರೆ - ನಾವು ಶಾಸ್ತ್ರ ಮೊದಲಾದವುಗಳನ್ನು ಓದುತ್ತಿದ್ದೆವು ಆದರೆ ಏನನ್ನೂ ತಿಳಿದುಕೊಂಡಿಲ್ಲ. ಒಂದುವೇಳೆ ಯಾರಾದರೂ ನನಗೆ ಈ ಶಿಕ್ಷಣವು ಗುರುವಿನಿಂದ ದೊರೆಯಿತೆಂದು ಹೇಳಿದರೆ ಗುರುವಿನಿಂದ ಒಬ್ಬರಿಗೆ ಮಾತ್ರ ಶಿಕ್ಷಣ ಸಿಗುತ್ತದೆಯೇ? ಗುರುಗಳಿಗೆ ಅನೇಕರು ಅನುಯಾಯಿಗಳಿರುತ್ತಾರೆ. ಒಂದುವೇಳೆ ಗುರುವಿನಿಂದ ಶಿಕ್ಷಣ ತೆಗೆದುಕೊಂಡರೆ ಗುರುವಿನ ಪದವಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ಮಾತು ಬಹಳ ಭಿನ್ನವಾಗಿದೆ. ಶಿವ ತಂದೆ ಇವರ ಮೂಲಕ ಶಿಕ್ಷಣ ಕೊಟ್ಟು ಎಲ್ಲರೊಂದಿಗಿನ ಬುದ್ಧಿಯ ಸಂಬಂಧವನ್ನು ದೂರಗೊಳಿಸುತ್ತಾರೆ. ಒಂದೇ ಕ್ಷಣದಲ್ಲಿ ಎಲ್ಲವನ್ನು ಬಿಡಿಸಿಬಿಟ್ಟರು. ಬಹಳ ಮಕ್ಕಳು ಹೀಗೆಯೇ ಮಾಡಿದರು. ಭಟ್ಟಿಯಾಗಬೇಕಿತ್ತು, ಪಾಕಿಸ್ತಾನದಲ್ಲಿ ಎಷ್ಟೊಂದು ಮಕ್ಕಳ ಪಾಲನೆ ಮಾಡಲಾಯಿತು. ಬುದ್ಧಿವಂತರಿಗೂ ಬುದ್ಧಿವಂತ ತಂದೆಯು ಕುಳಿತಿದ್ದರು. ದವಸ-ಧಾನ್ಯ ಚೆನ್ನಾಗಿ ಸಿಗುವುದಿಲ್ಲವೆಂದು ಪಾಕಿಸ್ತಾನದ ಸರ್ಕಾರದವರಿಗೆ ಹೇಳುತ್ತಿದ್ದೆವು. ತಕ್ಷಣ ಆ ಅಧಿಕಾರಿಗಳು ನಿಮಗೆ ಯಾವುದು ಚೆನ್ನಾಗಿದೆಯೋ ಅದನ್ನು ತೆಗೆದುಕೊಂಡು ಹೋಗಿ ಎಂದು ಹೇಳುತ್ತಿದ್ದರು. ಬುದ್ಧಿಯ ಬೀಗವನ್ನು ತೆರೆಯುವಂತಹವರು ತಂದೆಯಾಗಿದ್ದರು. ಸ್ವಲ್ಪ ಸಹನೆಯನ್ನು ಮಾಡಿಕೊಳ್ಳಬೇಕು. ಕುಮಾರಿಯರು ಎಷ್ಟೊಂದು ಪೆಟ್ಟು ತಿನ್ನುತ್ತಾರೆ. ಅವರು ತಂದೆಯನ್ನು ಎಷ್ಟೊಂದು ನೆನಪು ಮಾಡುತ್ತಾರೆ. ಬಾಬಾ ಕಮಾಲ್ ಆಗಿದೆ ನಮಗೆ ನಿಮ್ಮ ಈಶ್ವರೀಯ ಲಾಟರಿ ಸಿಗುತ್ತದೆ. ಮಕ್ಕಳು ಎಷ್ಟೊಂದು ಮಧುರರಾಗಬೇಕು. ಪ್ರೀತಿಯಿಂದ ನಡೆದುಕೊಳ್ಳಬೇಕು. ಮನೆಯವರನ್ನು ಜ್ಞಾನದಲ್ಲಿ ಬರುವಂತೆ ಮಾಡಬೇಕು. ಒಂದುವೇಳೆ ಆ ಮನೆಯ ರಚಯಿತ ಹೊರಟು ಹೋದರೆ ರಚನೆಯ ಗತಿ ಏನಾಗುತ್ತದೆ? ಇಲ್ಲಿ ಸನ್ಯಾಸಿಗಳ ಪಾತ್ರವಿತ್ತು, ಆ ಸಮಯದಲ್ಲಿ ಪವಿತ್ರತೆಯ ಅವಶ್ಯಕತೆಯಿತ್ತು. ಈ ಎಲ್ಲಾ ಆಟವು ಮಾಡಲ್ಪಟ್ಟಿದೆ. ಇಡೀ ರಾಜಧಾನಿಯ ಸ್ಥಾಪನೆಯಾಗುತ್ತಿದೆ. ಸತ್ಯಯುಗದಲ್ಲಿ ಪತಿತರನ್ನು ಪಾವನ ಮಾಡುವುದಿಲ್ಲ. ಈ ಸಂಗಮಯುಗವೇ ಪ್ರಖ್ಯಾತಿಯಾಗಿದೆ. ನಾನು ಕಲ್ಪ-ಕಲ್ಪದ ಸಂಗಮಯುಗದಲ್ಲಿ ಬರುತ್ತೇನೆಂದು ಮೊದಲೂ ಸಹ ಹೇಳಿದ್ದೆನೆಂದು ತಂದೆ ಹೇಳುತ್ತಾರೆ ಮತ್ತೆ ಅವರು ಯುಗ-ಯುಗದಲ್ಲಿ ಮೀನು-ಮೊಸಳೆ ಅವತಾರವೆಂದು ಬರೆದಿದ್ದಾರೆ. ಮನುಷ್ಯರು ಅದನ್ನು ಸತ್ಯ-ಸತ್ಯವೆಂದು ಹೇಳುತ್ತಾರೆ ಏಕೆಂದರೆ ರಾವಣ ರಾಜ್ಯವಲ್ಲವೇ! ಸನ್ಯಾಸಿಗಳು ಸದಾ ಶಾಂತಿಯನ್ನು ಬೇಡುತ್ತಾರೆ, ಸುಖವನ್ನು ಒಪ್ಪಿಕೊಳ್ಳುವುದಿಲ್ಲ. ಆದುದರಿಂದ ಅವರು ಈ ಜ್ಞಾನ ಸರಿಯಿಲ್ಲವೆಂದು ಹೇಳುತ್ತಾರೆ. ಆ ಪ್ರಪಂಚದಲ್ಲಿ ಸುಖ ಎಲ್ಲಿದೆ! ಏಕೆಂದರೆ ರಾಮ ಹಾಗೂ ರಾವಣ, ಕೃಷ್ಣ ಹಾಗೂ ಕಂಸ ಇದ್ದರೆಂದು ಹೇಳುತ್ತಾರೆ. ಆದರೆ ಸ್ವರ್ಗದಲ್ಲಿ ಅಪಾರವಾದ ಸುಖವಿತ್ತು. ಕೃಷ್ಣನನ್ನು ಬಹಳ ಪ್ರೀತಿ ಮಾಡುತ್ತಿದ್ದರು, ಅದು ಪುನಃ ಸ್ವರ್ಗದಲ್ಲಿಯೇ ಸಿಗುತ್ತದೆ. ಈಗ ನಿಮ್ಮ ಮನೋಕಾಮನೆ ಪೂರ್ಣವಾಗುತ್ತದೆ. ತಂದೆ ಕೃಷ್ಣಪುರಿಗೆ ಕರೆದೊಯ್ಯುವಂತಹ ಪುರುಷಾರ್ಥ ಮಾಡಿಸುತ್ತಿದ್ದಾರೆಂದು ನೀವು ತಿಳಿದುಕೊಂಡಿದ್ದೀರಿ ಆದುದರಿಂದ ತಂದೆಯ ಜೊತೆ ಸತ್ಯತೆ ಹಾಗೂ ಸ್ವಚ್ಛತೆ ಇರಬೇಕು. ಬಚ್ಚಿಟ್ಟುಕೊಳ್ಳುವುದರಿಂದ ಬಹಳ ನಷ್ಟವಾಗುತ್ತದೆ. ಸತ್ಯವನ್ನು ಹೇಳದ ಕಾರಣ ತಪ್ಪುಗಳ ವೃದ್ಧಿಯಾಗುತ್ತಿರುತ್ತದೆ. ತಂದೆಯು ಹೆಜ್ಜೆ-ಹೆಜ್ಜೆಯಲ್ಲಿ ಶ್ರೀಮತವನ್ನು ಕೊಡುತ್ತಾರೆ. ಆದರೂ ಸಹ ಯಾರಾದರೂ ತಂದೆಯ ಆದೇಶದಂತೆ ನಡೆಯದಿದ್ದರೆ ತಂದೆಯು ಏನು ಮಾಡುತ್ತಾರೆ!

ನೀವು ಈಶ್ವರೀಯ ಸಂತಾನರಲ್ಲಿ ಬಹಳ ಘನತೆ ಹಾಗೂ ಬುದ್ಧಿವಂತಿಕೆ ಇರಬೇಕೆಂದು ತಂದೆಯು ತಿಳಿಸುತ್ತಾರೆ. ಬಹಳ ಪ್ರೀತಿಯಿಂದ ನೀವು ಎಲ್ಲರಿಗೂ ತಂದೆಯ ಪರಿಚಯವನ್ನು ಕೊಡಬೇಕು ಪರಮಪಿತ ಪರಮಾತ್ಮನ ಜೊತೆ ನಿಮ್ಮ ಸಂಬಂಧವೇನು ಎಂದು ಕೇಳಬೇಕು. ಅವರು ಸ್ವರ್ಗದ ರಚಯಿತನಾದ್ದರಿಂದ ಸ್ವರ್ಗದ ಮಾಲೀಕತ್ವದ ಆಸ್ತಿಯಿರಬೇಕು. ನಿಮಗೆ ಆಸ್ತಿಯಿತ್ತು, ಮಾಯೆ ಸೋಲಿಸಿತು ಮತ್ತೆ ನಿಮಗೆ ಆಸ್ತಿಯನ್ನು ಕೊಡುತ್ತೇನೆ. ಲಕ್ಷ್ಮೀ-ನಾರಾಯಣರಾಗುವುದು ಇಲ್ಲಿಯ ಲಕ್ಷ್ಯವಾಗಿದೆ. ತಂದೆ ಅಗತ್ಯವಾಗಿ ಸತ್ಯಯುಗದ ರಾಜ್ಯಭಾಗ್ಯವನ್ನು ಕೊಡುತ್ತಾರೆ. ನೀವು ಮಕ್ಕಳು ಸೇವೆ ಮಾಡಿ ಎಲ್ಲರಿಗೂ 21 ಜನ್ಮಗಳಿಗೆ ಜೀವ ದಾನ ಕೊಡಬೇಕು. ನೀವು ಮಹಾನ್ ಪುಣ್ಯಾತ್ಮ ಆಗಿದ್ದೀರಿ. ನಿಮ್ಮಂತಹ ಪುಣ್ಯಾತ್ಮರು ಯಾರೂ ಆಗಲು ಸಾಧ್ಯವಿಲ್ಲ. ನೀವು ಪುಣ್ಯದ ಪ್ರಪಂಚಕ್ಕೆ ಹೋಗುವವರಾಗಿದ್ದೀರಿ ಆದುದರಿಂದ ನೀವು ಬಹಳ ಮಧುರರಾಗಬೇಕು. ಇವರು ಪತಿತ ಪಾವನ ಬಾಬಾ ಹಾಗೂ ದಾದಾ ಆಗಿದ್ದಾರೆ. ಮಕ್ಕಳನ್ನು ವೇಶ್ಯಾಲಯದಿಂದ ಬಿಡಿಸಿ ಶಿವಾಲಯಕ್ಕೆ ಕರೆದೊಯ್ಯಲು ಬಂದಿದ್ದಾರೆ. ಇದನ್ನು ಅಪಾರವಾದ ನರಕವೆಂದೂ ಸಹ ಹೇಳುತ್ತಾರೆ. ಇಲ್ಲಿ ದುಃಖವೇ ದುಃಖವಿದೆ. ತಂದೆಯು ದುಃಖಧಾಮದಿಂದ ಬಿಡಿಸಿ ಸುಖಧಾಮದಲ್ಲಿ ಕರೆದೊಯ್ಯಲು ಬಂದಿದ್ದಾರೆ. ನಾವು ಇಂತಹ ಪಾರಲೌಕಿಕ ತಾಯಿ-ತಂದೆಯಿಂದ ಸದಾಕಾಲದ ಸುಖವನ್ನು ತೆಗೆದುಕೊಳ್ಳಲು ಹಾಗೂ ಮಿಲನ ಮಾಡಲು ಬಂದಿದ್ದೇವೆ. ಇದು ಬಹಳ ಖುಷಿಯ ಮಾತಾಗಿದೆ. ನಾವು ಶಿವಾಲಯವನ್ನು ಸ್ಥಾಪನೆ ಮಾಡುವಂತಹ ಭೋಲಾನಾಥ ಭಂಡಾರಿ ತಂದೆಯ ಬಳಿ ಹೋಗುತ್ತೇವೆಂಬ ಖುಷಿಯು ನಿಮಗಿದೆ. ಶಿವನನ್ನು ನೆನಪು ಮಾಡಬೇಕು, ರಥವನ್ನು ನೆನಪು ಮಾಡಬಾರದು. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ತಂದೆಯ ಜೊತೆ ಸದಾ ಸತ್ಯವಾಗಿರಬೇಕು, ಏನನ್ನೂ ಬಚ್ಚಿಟ್ಟುಕೊಳ್ಳಬಾರದು. ಬಹಳ ಘನತೆ ಹಾಗೂ ಬುದ್ಧಿವಂತಿಕೆಯಿಂದ ನಡೆಯಬೇಕು.

2. 21 ಜನ್ಮಗಳಿಗಾಗಿ ಪ್ರತಿಯೊಬ್ಬರಿಗೂ ಜೀವದಾನ ಕೊಡುವಂತಹ ಸೇವೆಯನ್ನು ಮಾಡಿ ಪುಣ್ಯಾತ್ಮರಾಗಬೇಕು. ಆತ್ಮವೆಂಬ ಸೂಜಿಯ ಮೇಲೆ ಯಾವ ತುಕ್ಕು ಹಿಡಿದಿದೆ, ಅದನ್ನು ನೆನಪಿನ ಯಾತ್ರೆಯಲ್ಲಿದ್ದು ಸಮಾಪ್ತಿ ಮಾಡಿಕೊಳ್ಳಬೇಕು.

ವರದಾನ: ಸ್ನೇಹದ ವಿಮಾನದ ಮೂಲಕ ಸಮೀಪತೆಯ ಅನುಭವ ಮಾಡುವಂತಹ ಪಾಸ್-ವಿತ್-ಆನರ್ ಭವ.

ಸ್ನೇಹದ ಶಕ್ತಿಯಿಂದ ಎಲ್ಲಾ ಮಕ್ಕಳು ಮುಂದುವರೆಯುತ್ತಾ ಇದ್ದಾರೆ. ಸ್ನೇಹದ ವಿಮಾನವು ತನುವಿನಿಂದ, ಮನಸ್ಸಿನಿಂದ ಅಥವಾ ಹೃದಯದಿಂದ ತಂದೆಯ ಸಮೀಪಕ್ಕೆ ಕರೆತರುತ್ತದೆ. ಜ್ಞಾನ, ಯೋಗ, ಧಾರಣೆಯಲ್ಲಿ ಯಥಾಶಕ್ತಿ ನಂಬರ್‌ವಾರ್ ಇದ್ದಾರೆ ಆದರೆ ಸ್ನೇಹದಲ್ಲಿ ಪ್ರತಿಯೊಬ್ಬರೂ ನಂಬರ್‌ವನ್. ಸ್ನೇಹದಲ್ಲಿ ಎಲ್ಲರೂ ಪಾಸ್ ಆಗಿದ್ದಾರೆ. ಸ್ನೇಹದ ಅರ್ಥವೇ ಇದಾಗಿದೆ - ಸಮೀಪವಿರುವುದು ಮತ್ತು ಉತ್ತೀರ್ಣರಾಗುವುದು ಅಥವಾ ಪ್ರತಿಯೊಂದು ಪರಿಸ್ಥಿತಿಯನ್ನು ಸಹಜವಾಗಿ ಪಾರು ಮಾಡಿ ಬಿಡುವುದು. ಈ ರೀತಿ ಪಾರು ಮಾಡುವವರೇ ಪಾಸ್-ವಿತ್-ಆನರ್ ಆಗುತ್ತಾರೆ.

ಸ್ಲೋಗನ್: ಮಾಯೆ ಹಾಗೂ ಪ್ರಕೃತಿಯ ಬಿರುಗಾಳಿಗಳಲ್ಲಿ ಸುರಕ್ಷಿತವಾಗಿರಬೇಕೆಂದರೆ ಹೃದಯ ಸಿಂಹಾಸನಧೀಶರು ಆಗಿ ಬಿಡಿ.